## ಗುರುತತ್ತ್ವ

# ಕರುಣಾಳು ಗುರು

ಸ್ವಾಮಿ ಸ್ವಾತ್ಮಾರಾಮಾನಂದ

### ಗುರುವಿನ ಸ್ಥಾನ

**ಗು**ರು ಎಂದರೆ ಅಂಧಕಾರವನ್ನು ನಾಶಮಾಡುವ ಬೆಳಕು ಎಂದೂ ಆಗುತ್ತದೆ. ಯಾವುದೇ ಕ್ಷೇತ್ರದಲ್ಲೂ ಗುರುವಿನ ಜ್ಞಾನದ ಬೆಳಕಿನ ಸಹಾಯ ಬಹಳ ಅವಶ್ಯಕ. ಅದಕ್ಕೇ ಏನೋ ಗುರು ಎಂಬ ಪದವು ಇತ್ತೀಚಿಗೆ ಆಂಗ್ಲ ಮತ್ತು ಇನ್ನಿತರ ಭಾಷೆಗಳಲ್ಲೂ ಬಳಕೆಗೆ ಬಂದಿರುವುದು. ಸಾಧಾರಣ ಸ್ತರದಲ್ಲಿಯೂ ಎಲ್ಲಾ ಕ್ಷೇತ್ರಗಳಲ್ಲಿಯೂ ಮೊದಲೇ ಅನುಭವ ಇರುವವರ ಮಾರ್ಗದರ್ಶನ ಬೇಕೇ ಬೇಕು. ಹೀಗಿರುವಾಗ ಕಷ್ಟಸಾಧ್ಯವಾದ ಆಧ್ಯಾತ್ಮಿಕತೆಯ ದಾರಿಯಲ್ಲಂತೂ ನಾವು ದಾರಿ ತಪ್ಪದಂತೆ, ಕಷ್ಟಕ್ಕೆ ಸಿಲುಕಿಹಾಕಿಕೊಳ್ಳದಂತೆ ಕೈಹಿಡಿದು ನಡೆಸುವವರು ಬೇಕೇ ಬೇಕು. ಮನುಷ್ಯ ಜೀವನದ ಚರಮ ಗುರಿಯಾದ ಭಗವತ್ಸಾಕ್ಷಾತ್ಕಾರವನ್ನು ಸಂಪಾದಿಸುವಲ್ಲಿ ಗುರುವಿನ ಮಾರ್ಗದರ್ಶನವಿಲ್ಲದೆ ಗುರಿ ಮುಟ್ಟುವುದು ಸಾಧ್ಯವೇ ಇಲ್ಲ. ಇಲ್ಲಿ ದಾರಿ ತಪ್ಪಿದರೆ ಅಪಾರವಾದ ಸಂಕಷ್ಟಕ್ಕೆ ಗುರಿಯಾಗಬೇಕಾಗಬಹುದು. ಆದುದರಿಂದಲೇ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಮಹತ್ತ್ವವನ್ನು ಬಹಳವಾಗಿ ಕೊಂಡಾಡಿದ್ದಾರೆ.

**'ಮಾತೃ ದೇವೋ ಭವ; ಪಿತೃ ದೇವೋ ಭವ; ಆಚಾರ್ಯ ದೇವೋ ಭವ'** ಎಂಬ ಈ ಉಪನಿಷತ್ ವಾಕ್ಯಗಳು ತಾಯಿ, ತಂದೆ, ಆಚಾರ್ಯರು ನಮ್ಮ ದೇವರಾಗಲಿ ಎಂದು ಆದೇಶಿಸುತ್ತವೆ. ಈ ಸಂದರ್ಭದಲ್ಲಿ ಒಂದು ತಮಾಷೆಯ ಕಥೆಯನ್ನು ಹೇಳಬಹುದು. ಒಂದು ದಿನ ಒಬ್ಬರು ಮಾಸ್ತರರು ಶಾಲೆಯಲ್ಲಿ ಪಾಠ ಮಾಡುವಾಗ ವಿದ್ಯಾರ್ಥಿಗಳನ್ನು ಪರೀಕ್ಷಿಸಲೋಸುಗ, "ಮಕ್ಕಳೇ, ತಂದೆ ತಾಯಿ ದೊಡ್ಡವರೋ? ಗುರುಗಳು ದೊಡ್ಡವರೋ?" ಎಂದು ಕೇಳಿದರಂತೆ. ಸಾಧಾರಣವಾಗಿ ಎಲ್ಲರೂ ತಂದೆ ತಾಯಿಯ ಪರವಾಗಿ ನಿಂತರು. ಆದರೆ ಅಲ್ಲಿದ್ದ ಒಬ್ಬಳು ಹುಡುಗಿ ಹೇಳಿದಳು, "ಸಾರ್, ಗುರುಗಳೇ ದೊಡ್ಡವರು." ಮಾಸ್ತರರು ಅವಳಿಗೆ ಕಾರಣ ಕೇಳಿದರು. ಆ ಮಗು, "ನನ್ನ ತಾಯಿಗೆ ಏಳು ಜನ ಮಕ್ಕಳು. ಒಂದು ಮಗುವನ್ನು ಮಲಗಿಸಿದರೆ, ಇನ್ನೊಂದು ಏಳುವುದು, ಅದನ್ನು ಮಲಗಿಸಿದರೆ, ಮತ್ತೊಂದು ಏಳುವುದು, ಹೀಗೆ ಎಲ್ಲರನ್ನೂ ಮಲಗಿಸಲು ಅವಳು ಬಹಳ ಕಷ್ಟ ಪಡುತ್ತಾಳೆ. ಆದರೆ ನೀವು ಪಾಠ ಶುರುಮಾಡುತ್ತಿದ್ದಂತೆ ನಾವು ಅಂದರೆ ಎಲ್ಲಾ ೯೦ ಮಕ್ಕಳೂ ನಿದ್ರೆಗೆ ಹೋಗಿಬಿಡುತ್ತೇವೆ, ಆದ್ದರಿಂದ ನೀವೇ ತಾಯಿಗಿಂತ ದೊಡ್ಡವರು" ಎಂದಳಂತೆ. ಗುರುಗಳು ಈ ರೀತಿಯಾಗಿ ದೊಡ್ಡವರಲ್ಲ. ಗುರುಗಳೆಂದರೆ ಆಧ್ಯಾತ್ಮಿಕ ಜೀವನದಲ್ಲಿ ನಮ್ಮ ಕೈ ಹಿಡಿದು ನಡೆಸುವವರು. ನಮ್ಮ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕ ಗುರುವನ್ನು ತಂದೆ ತಾಯಿಗಳ ಸ್ಥಾನಕ್ಕಿಂತ ಎತ್ತರದಲ್ಲಿ ಇರಿಸಲಾಗಿದೆ; ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಸಾಕ್ಷಾತ್ ಮಹೇಶ್ವರನು ಎಂದು ಹೇಳಿ ಗುರುವಿಗೆ ದೇವರ ಸ್ಥಾನವನ್ನೇ ಕಲ್ಪಿಸಲಾಗಿದೆ.

### ಗುರುವಿನಲ್ಲಿ ಕಾಣುವ ತ್ಯಾಗಬುದ್ಧಿ

ಇದಕ್ಕೆ ಕಾರಣವಾವುದು? ಅದಕ್ಕೆ ಉತ್ತರ – **ಗುರುವಿನ ತ್ಯಾಗ!** ಎಷ್ಟು ತ್ಯಾಗಬುದ್ಧಿ ನಮ್ಮಲ್ಲಿ ನೆಲೆ ನಿಲ್ಲುವುದೋ ಅಷ್ಟೂ ನಾವು ಭಗವಂತನಿಗೆ ಹತ್ತಿರವಾಗುತ್ತಾ ಹೋಗುತ್ತೇವೆ. ಗುರುವಿನಲ್ಲಿರುವ **ಅಪರಿಮಿತ ತ್ಯಾಗ, ಅಹೈತುಕ ಕರುಣೆ, ಪ್ರೀತಿ** – ಇವು ಗುರುವನ್ನು ಭಗವಂತನಿಗೆ ಸಮಾನನಾಗುವಂತೆ ಮಾಡುತ್ತವೆ. ಅವನ ತ್ಯಾಗ ವೆಂತಹದು ಎಂದು ನೋಡೋಣ.

ದಾನಗಳಲ್ಲಿ **ಅನ್ನದಾನವು** ಕೆಳ ಸ್ತರದ್ದು. ಏಕೆಂದರೆ ಆಹಾರ ನೀಡಿದಾಗ ಅದನ್ನು ಪಡೆದವನ ಕಷ್ಟ ನಿವಾರಣೆಯಾಗುವುದು ಕೇವಲ ೩–೪ ತಾಸುಗಳು ಮಾತ್ರ, ನಂತರ ಮತ್ತೆ ಅವನಿಗೆ ಹಸಿವಾಗುವುದು. ಅದಕ್ಕಿಂತಲೂ ಶ್ರೇಷ್ಠಮಟ್ಟದ್ದು **ವಸ್ತ್ರದಾನ**. ಇದರಿಂದ ಕೆಲವು ತಿಂಗಳು ಒಬ್ಬನ ಮಾನ ಮುಚ್ಚಬಹುದು. ಇದಕ್ಕಿಂತಲೂ ಶ್ರೇಷ್ಠವಾದುದು **ಪ್ರಾಣದಾನ** ಅಂದರೆ ಅನಾರೋಗ್ಯ ಪೀಡಿತನಿಗೆ ಔಷಧ ನೀಡಿ, ಶುಶ್ರೂಷೆ ಮಾಡಿ ಅವನ ಪ್ರಾಣರಕ್ಷಣೆ ಮಾಡುವುದು. ಇದಕ್ಕಿಂತಲೂ ಉತ್ತಮವಾದುದು ವಿದ್ಯಾದಾನ ಎಂದರೆ **ಲೌಕಿಕ ವಿದ್ಯಾದಾನ**. ಈ ವಿದ್ಯೆ ಪಡೆದವನು ತನ್ನ ಕಾಲ ಮೇಲೆ ನಿಂತು ಸಂಪಾದನೆಯಿಂದ ತನ್ನ ಸಂಸಾರವನ್ನು ಮತ್ತು ಬೇರೆಯವರನ್ನು ಸಾಕಬಹುದು. ಅವನನ್ನು ಸ್ವತಂತ್ರನಾಗುವಂತೆ ವಿದ್ಯಾದಾನ ಮಾಡುತ್ತದೆ. ಆದುದರಿಂದ ಶ್ರೇಷ್ಠವಾದ ದಾನ ವಿದ್ಯಾದಾನ. ಈ ಎಲ್ಲಾ ದಾನಗಳನ್ನು ಜಗತ್ತಿನಲ್ಲಿ ಯಾರು ಬೇಕಾದರೂ ನೀಡಬಹುದು. ಆದರೆ ಈ ಎಲ್ಲ ದಾನಗಳಿಗೂ ಮಿಗಿಲಾದ ಇನ್ನೊಂದು ದಾನವಿದೆ. ಅದೇ **ಪರಾವಿದ್ಯಾ ದಾನ** (ಆಧ್ಯಾತ್ಮಿಕ ವಿದ್ಯಾದಾನ). ಈ ದಾನವನ್ನು ಸದ್ಗುರು ಮಾತ್ರ ನೀಡಬಲ್ಲ. ಮಿಕ್ಕ ದಾನಗಳಿಗಿಂತ ಈ ದಾನದಲ್ಲಿರುವ ವಿಶೇಷವೇನೆಂದರೆ, ಇತರ ದಾನಗಳ ಉಪಯೋಗ ಕೇವಲ ಈ ಜನ್ಮದಲ್ಲಿ ಮಾತ್ರ ಲಭ್ಯವಾದರೆ, ಆಧ್ಯಾತ್ಮಿಕ ವಿದ್ಯಾದಾನವು ನಮಗೆ ಈ ಜನ್ಮದಲ್ಲಿ ಶಾಂತಿ ಆನಂದಗಳನ್ನು ಕೊಡುವುದಲ್ಲದೆ, ಜನ್ಮಜನ್ಮಾಂತರಗಳ ಅವಿದ್ಯಾ ಬಂಧನದಿಂದಲೂ ಮುಕ್ತರನ್ನಾಗಿಸುತ್ತದೆ.

**ಅಹೈತುಕ ಕೃಪೆ, ದಯೆ, ಕರುಣೆ, ಪ್ರೀತಿ** – ಇವುಗಳು ಗುರುವಿನಲ್ಲಿ ಕಾಣಬರುವ ಅಪ್ರತಿಮ ಗುಣಗಳು. ತಾಯಿಯ ಅಪಾರ ಕರುಣೆಯನ್ನು ಜಗತ್ತೆಲ್ಲವೂ ಕೊಂಡಾಡದಿರದು. ಆದರೆ ಅದರಲ್ಲೂ ಸ್ವಾರ್ಥದ ಲವಲೇಶ ಅಡಗಿರುತ್ತದೆ. ತನ್ನ ಶಿಶುವಿಗೆ ಮಾತ್ರ ಅವಳ ಪ್ರೀತಿ ಮೀಸಲು. ಇನ್ನೊಂದು ಮಗುವಿನೆಡೆ ಆ ಪ್ರೀತಿ ಹರಿಯದು. ಅಲ್ಲದೆ, ತಂದೆ ತಾಯಿಗಳಿಗೆ ತಾವು ವೃದ್ಧರಾದಾಗ ತಮ್ಮ ಮಕ್ಕಳು ಆಸರೆಯಾಗಿ ನಿಲ್ಲ ಬೇಕು ಎಂಬ ಆಸೆ ಇದ್ದೇ ಇರುತ್ತದೆ. ಯಾವುದೇ ರೀತಿಯ ರಕ್ತಸಂಬಂಧ ವಿಲ್ಲದಿದ್ದರೂ, ಗುರುವು ನಮ್ಮಿಂದ ಎಂದೆಂದಿಗೂ ಯಾವ ರೀತಿಯಲ್ಲೂ ಏನನ್ನೂ ಅಪೇಕ್ಷೆ ಪಡದೆಯೇ ಅಪಾರ ಕರುಣೆಯನ್ನು ಹರಿಸುತ್ತಾನೆ; ತನ್ನ ಎಲ್ಲ ತಪಸ್ಸಿನ ಫಲವನ್ನು ನಮಗೆ ಧಾರೆ ಎರೆಯುತ್ತಾನೆ.

---

*ಪೂಜ್ಯ ಸ್ವಾಮೀಜಿಯವರು ಬೆಂಗಳೂರಿನಲ್ಲಿರುವ ರಾಮಕೃಷ್ಣ ವಿದ್ಯಾರ್ಥಿ ಮಂದಿರದ ಮುಖ್ಯಸ್ಥರು. ಸುಮಧುರವಾಗಿ ಭಜನೆ ಹಾಡುವ ಇವರು ಉತ್ತಮ ಭಾಷಣಕಾರರು ಕೂಡ.*

## ಗುರುವಿನ ಹಿರಿಮೆ

ಗುರುವಿನ ಮಹಿಮೆ ಅಪಾರ. ನಮಗೆಲ್ಲ ವಾಲ್ಮೀಕಿ, ನಾರದರ ಕಥೆ ಗೊತ್ತೇ ಇದೆ. ತನ್ನ ಹಿಂದಿನ ಜೀವನದಲ್ಲಿ ದಾರಿಗಳ್ಳನಾಗಿದ್ದ ವಾಲ್ಮೀಕಿ ದಾರಿಹೋಕರನ್ನು ಸುಲಿಗೆ ಮಾಡಿ ಜೀವನ ಸಾಗಿಸುತ್ತಿದ್ದ. ಅವನ ಮನಸ್ಸನ್ನು ಪರಿವರ್ತಿಸಲು ನಾರದರು ಆ ದಾರಿಯಲ್ಲಿ ಬಂದರು. ವಾಲ್ಮೀಕಿ ಅಡ್ಡಗಟ್ಟಿದಾಗ, ನಾರದರು ಆತನನ್ನು, "ಈ ಎಲ್ಲ ಪಾಪ ಕಾರ್ಯಗಳನ್ನು ಯಾರಿಗಾಗಿ ಮಾಡುತ್ತಿದ್ದೀಯೋ, ಆ ಬಂಧುಗಳು ನಿನ್ನ ಪಾಪವನ್ನು ಹಂಚಿಕೊಳ್ಳುವರೇ?" ಎಂದು ಪ್ರಶ್ನಿಸಿದರು. ಕಳ್ಳ ಮನೆಗೆ ಬಂದು ತನ್ನ ಬಂಧುಗಳನ್ನು ಕೇಳಿದನು. ಆಗ ಅವನ ಹೆಂಡತಿ–ಮಕ್ಕಳು, ತಂದೆ–ತಾಯಿ ಯಾರೂ ಸಹ ಅವನ ಪಾಪವನ್ನು ಹಂಚಿಕೊಳ್ಳಲು ಸಿದ್ಧರಿರಲಿಲ್ಲ. ಅವರೆಲ್ಲ ಕೇವಲ ಅವನ ಸಂಪಾದನೆಯಿಂದ ಬಂದ ಸುಖವನ್ನು ಅನುಭವಿಸುತ್ತಿದ್ದರೇ ಹೊರತು, ಅವನ ಪಾಪವನ್ನು ಅನುಭವಿಸಲು ಸಿದ್ಧರಿರಲಿಲ್ಲ. "ತಂದೆ, ತಾಯಿ, ಹೆಂಡತಿ, ಮಕ್ಕಳನ್ನು ಕಾಪಾಡುವುದು ನಿನ್ನ ಕರ್ತವ್ಯ" ಎಂದು ಅವರ ವಾದ. ಆಗ ಮನನೊಂದ ಆ ಕಳ್ಳ ಎಲ್ಲವನ್ನು ತ್ಯಜಿಸಿ ನಾರದರಿಂದ ರಾಮ ನಾಮ ಸ್ವೀಕರಿಸಿ ವಾಲ್ಮೀಕಿಯಾಗಿ ರಾಮಾಯಣವನ್ನು ರಚಿಸಿದ್ದು ಜಗತ್ಪ್ರಸಿದ್ಧವಾಗಿದೆ. ಹೀಗೆ ರಕ್ತಸಂಬಂಧಿಗಳಾದ ಬಂಧುಗಳಿಗಿಂತ ನಾರದರಂಥ ಗುರುವೇ ನಮ್ಮ ಹಿತೈಷಿಯಾಗುವನು; ನಮ್ಮ ಬಾಳಿನ ಹಾದಿಯಲ್ಲಿ ಮಾರ್ಗದರ್ಶಕನಾಗುವನು.

ಗುರುವು ನಮಗೆ ಮಂತ್ರದೀಕ್ಷೆಯನ್ನು ಕರುಣಿಸುವ ಮೂಲಕ, ನಮ್ಮನ್ನು ಮಾಯೆಯ ಬಂಧನದಿಂದ ಮತ್ತು ಜನ್ಮಜನ್ಮಾಂತರಗಳ ಪರತಂತ್ರತೆಯಿಂದ ಬಿಡಿಸಿ ಸ್ವತಂತ್ರರನ್ನಾಗಿಸುತ್ತಾನೆ. ಆ ಮೂಲಕ ನಮಗೆ ಬಾಧಕವಾಗಿರುವ ಬಹು ದೊಡ್ಡ ಪಾಪದ ಹೊರೆಯನ್ನು ತಾನು ಸ್ವೀಕರಿಸಿ, ನಮ್ಮನ್ನು ಬಹಳ ದೊಡ್ಡ ವಿಪತ್ತಿನಿಂದ ಬಿಡಿಸುತ್ತಾನೆ. ಅದಲ್ಲದೆ, ತಾನೇ ಆ ಪಾಪದ ಫಲವನ್ನು ಅನುಭವಿಸಿ ಕಷ್ಟಪಡುತ್ತಾನೆ.

ಶ್ರೀರಾಮಕೃಷ್ಣರ ಜೀವನದಲ್ಲಿ, ಗಿರೀಶ್ ಚಂದ್ರ ಘೋಷನ ಪಾಪದ ಫಲವನ್ನು ಅವರು ಅನುಭವಿಸಿರುವುದನ್ನು ಓದುತ್ತೇವೆ. ಅದಲ್ಲದೆ ಇನ್ನೂ ಅನೇಕ ಪಾತಕಿಗಳ ಪಾಪದ ಫಲವನ್ನು ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರು ಅನುಭವಿಸಿರುವುದನ್ನು ಕಾಣುತ್ತೇವೆ. ರಾಮಕೃಷ್ಣ ಆಶ್ರಮದ ಒಬ್ಬರು ಹಿರಿಯ ಸ್ವಾಮಿಗಳು ಒಮ್ಮೆ ತೀವ್ರ ಬೆನ್ನುನೋವಿನಿಂದ ತುಂಬ ಯಾತನೆಯನ್ನು ಅನುಭವಿಸುತ್ತಿದ್ದರು. ಅದೆಷ್ಟು ಇತ್ತೆಂದರೆ, ಕಣ್ಣೀರಿಡುವಷ್ಟು! ಆ ಬೇನೆಯನ್ನು ಸಹಿಸಲಾಗದೆ ಪರಿಹಾರ ಹುಡುಕುತ್ತಿದ್ದ ಅವರಿಗೆ ಒಂದು ಆಲೋಚನೆ ಬಂದಿತಂತೆ. ನಾನೇಕೆ ಈ ನೋವನ್ನು ಗಿರೀಶ್ ಘೋಷನಂತೆ ನನ್ನ ಗುರುವಿಗೆ ಅರ್ಪಿಸಿಬಿಡಬಾರದು ಎಂದುಕೊಂಡರು ಅವರು. ಆಗ ಅವರು ಬೇಲೂರು ಮಠದಲ್ಲಿದ್ದರು. ದಿನನಿತ್ಯದಂತೆ, ಮರುದಿನ ಸಂಘದ ಪರಮಾಧ್ಯಕ್ಷರಾದ ವೀರೇಶ್ವರಾನಂದಜೀ ಮಹಾರಾಜರಿಗೆ ಪ್ರಣಾಮ ಸಲ್ಲಿಸುವಾಗ, ತಮ್ಮ ಗುರುಗಳಾದ ಅವರಿಗೆ ತಮ್ಮ ಬೆನ್ನು ನೋವು ತೆಗೆದುಕೊಳ್ಳುವಂತೆ ಮನಸ್ಸಿನಲ್ಲೇ ಪ್ರಾರ್ಥಿಸಿಕೊಂಡರು. ಹೊರಗೆ ಬರುತ್ತಿದ್ದಂತೆ, ಆಗ ರಾಮಕೃಷ್ಣ ಮಹಾಸಂಘದ ಸಹಾಯಕ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಭೂತೇಶಾನಂದಜಿ ಮಹಾರಾಜರು ಇವರು ಮನಸ್ಸಿನಲ್ಲಿ ಮಾಡಿದ್ದ ಸಂಕಲ್ಪವನ್ನು ತಿಳಿದು, "ಎಂತಹ ಕೆಲಸ ಮಾಡಿಬಿಟ್ಟೆ" ಎಂದು ಉದ್ಗರಿಸಿ ಹೊರಟು ಹೋದರಂತೆ. ಆಶ್ಚರ್ಯವೋ ಎಂಬಂತೆ ಅವತ್ತಿನಿಂದಲೇ ವೀರೇಶ್ವರಾನಂದಜಿ ಮಹಾರಾಜರಿಗೆ ಅಸಾಧ್ಯ ಬೆನ್ನುನೋವು ಅಂಟಿಕೊಂಡಿತು. ಅವರಿಗೆ ಓಡಾಡಲೂ ಆಗದಂತಾಯಿತು. ಇದರಿಂದ ಬಹಳವಾಗಿ ನೊಂದುಕೊಂಡ ಆ ಸ್ವಾಮಿಗಳು ಇನ್ನೊಮ್ಮೆ ಗುರುಗಳಿಗೆ ಪ್ರಣಾಮ ಮಾಡುವ ಸಮಯದಲ್ಲಿ ನೋವನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಮನಸ್ಸು ಮಾಡಿದರು. ಆದರೆ ಧೈರ್ಯ ಸಾಲಲಿಲ್ಲ. ನಾಲ್ಕು ದಿವಸಗಳಾದ ಮೇಲೆ ತಾನಾಗಿಯೇ ಆ ನೋವು ವೀರೇಶ್ವರಾನಂದಜಿಯವರನ್ನು ಬಿಟ್ಟುಹೋಯಿತು. ಆರು ತಿಂಗಳುಗಳ ಕಾಲ ಕಾಡಿದ ಆ ಬೆನ್ನು ನೋವು ಮತ್ತೆ ಮರುಕಳಿಸಲಿಲ್ಲ ಎಂದು ನೆನಪಿಸಿಕೊಳ್ಳುತ್ತಾರೆ ಆ ಸ್ವಾಮೀಜಿ. ಹೀಗೆ ನಮ್ಮ ಗುರುಗಳು ನಮಗೆ ಒಳ್ಳೆಯದಾಗಲಿ ಎಂಬ ಒಂದೇ ಉದ್ದೇಶದಿಂದ, ನಮ್ಮ ನೋವಿನ ಹೊರೆಯನ್ನು ಕೂಡ ತಾವೇ ತೆಗೆದುಕೊಳ್ಳುತ್ತಾರೆ.

> ಆಧ್ಯಾತ್ಮಿಕ ಜೀವನ ಜಾಗೃತವಾಗಬೇಕಾದರೆ, ಅದಕ್ಕೆ ಪ್ರೇರಣೆ ಮತ್ತೊಂದು ಜಾಗೃತವಾದ ಜೀವಿಯಿಂದ ಬರಬೇಕು. ಯಾರಿಂದ ಇಂತಹ ಪ್ರೇರಣೆ ಬರುವುದೋ ಅವರೇ ಗುರುಗಳು. ಯಾರಿಗೆ ಇದನ್ನು ಕೊಡುವರೋ ಅವನೇ ಶಿಷ್ಯ. – ಸ್ವಾಮಿ ವಿವೇಕಾನಂದ

ಇಂಥ ಅಪಾರ ಕರುಣಾಶಾಲಿಯಾದ ಗುರುವಿಗೆ ಶರಣಾಗದೆ, ಸಾಧಕನಿಗೆ ಬೇರೆ ದಾರಿಯೇ ಇಲ್ಲ. ಶ್ರೀರಾಮಕೃಷ್ಣರು ಹೇಳುತ್ತಾರೆ: "ಗುರುವಿನ ಮಾತಿನಲ್ಲಿ ಶ್ರದ್ಧೆ ಇರಲೇಬೇಕು. ಗುರುವು ಸಚ್ಚಿದಾನಂದನಲ್ಲದೇ ಬೇರೆ ಅಲ್ಲ. ಅವನ ಮಾತಿನಲ್ಲಿ ನಿನಗೆ ಮಗುವಿನಂತೆ ವಿಶ್ವಾಸವಿರುವುದಾದರೆ ನೀನು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲೆ." ಮತ್ತೊಂದೆಡೆ ಅವರೇ ಹೇಳುವಂತೆ ಗುರುವಿನ ಚಾರಿತ್ರ್ಯದ ಬಗ್ಗೆ ಶಿಷ್ಯನಾದವನು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. "ನನ್ನ ಗುರುವು ಮದ್ಯದಂಗಡಿಗೆ ಹೋದರೂ ಸಹ ನನ್ನ ಪಾಲಿಗಂತೂ ಅವನು ಶಾಶ್ವತ ಆನಂದದ ಸಾಕಾರಮೂರ್ತಿಯಾಗಿರುತ್ತಾನೆ. ಮನುಷ್ಯ ಗುರುವಿನಿಂದ ದೀಕ್ಷೆಯನ್ನು ಪಡೆದ ವ್ಯಕ್ತಿ ಆತನನ್ನು ಕೇವಲ ಮನುಷ್ಯ ಎಂದು ಭಾವಿಸಿದ್ದೇ ಆದರೆ, ಅವನಿಗೆ ಯಾವ ಆಧ್ಯಾತ್ಮಿಕ ಉನ್ನತಿಯೂ ಉಂಟಾಗದು. ಗುರುವನ್ನು ಸಾಕ್ಷಾತ್ ಭಗವಂತನೇ ಎಂಬುದಾಗಿ ಭಾವಿಸಿದರೆ ತಾನೆ ಮಂತ್ರದೀಕ್ಷೆ ಪಡೆದವನಿಗೆ ಮಂತ್ರದಲ್ಲಿ ಶ್ರದ್ಧೆಯುಂಟಾಗುವುದು! ಶ್ರದ್ಧೆಯುಂಟಾದರೆ ಎಲ್ಲಾ ದೊರೆತ ಹಾಗೆಯೇ. ಅದು ಹೇಗೆ ಎಂದರೆ, ಏಕಲವ್ಯನು ಗುರು ದ್ರೋಣನ ಮಣ್ಣಿನ ವಿಗ್ರಹವನ್ನು ಗುರುವೆಂದೇ ಪೂಜಿಸಿ ಸಿದ್ಧಿಯನ್ನು ಗಳಿಸಿದಂತೆ."

**ಹರೌ ರುಷ್ಟೇ ಗುರುಃ ತ್ರಾಯತೇ** – ಹರನು ಕೋಪಿಸಿಕೊಂಡರೆ ಗುರುವು ಕಾಪಾಡುತ್ತಾನೆ. ಗುರುವು ಕುಪಿತನಾದರೆ ಯಾರೂ ಕಾಪಾಡಲಾರರು. ಆದುದರಿಂದ ಆಧ್ಯಾತ್ಮಿಕ ಜೀವನದಲ್ಲಿ ಗುರುವಿನ ಪಾತ್ರ ಬಹಳ ಹಿರಿದು. ಹೀಗಾಗಿ ಸದ್ಗುರುವನ್ನು ಆಶ್ರಯಿಸಿ ಜೀವನದ ಪರಮ ಗುರಿಯನ್ನು ಹೊಂದೋಣ.